## 4. ವಿತ್ತೀಯ ಕಾರ್ಯಕಲಾಪ

### 2000-2001ನೇ ಸಾಲಿನ ಪೂರಕ ಅಂದಾಜುಗಳ ಮಂಡನೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ, "2000-2001ನೇ ಸಾಲಿನ ಪೂರಕ ಅಂದಾಜುಗಳನ್ನು (ಅಂತಿಮ ಕರಡು) ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

## 5. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ(ಅ): ಹಾಸನ ತಾಲ್ಲೂಕಿನ ಅರಸೀಕೆರೆ ಊರಿನ ಪಕ್ಕದಲ್ಲಿ ನೀರಾ ಇಳಿಸುವುದರ ಬಗ್ಗೆ ನಡೆದಂತಹ ಪೊಲೀಸ್ ದೌರ್ಜನ್ಯದ ಬಗ್ಗೆ.

+ ಶ್ರೀ ಡಿ.ಎ. ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಗೃಹ ಸಚಿವರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸದನದಲ್ಲಿಲ್ಲದಿದ್ದರೂ ನಾನು ಅವರ ಖಾತೆಗೆ ಸಂಬಂಧಪಟ್ಟ ಒಂದು ವಿಚಾರದ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ. ನಿನ್ನೆ ದಿನ ಹಾಸನ ತಾಲ್ಲೂಕಿನ ಅರಸೀಕೆರೆ ಊರಿನ ಪಕ್ಕದಲ್ಲಿ ನಡೆದಂತಹ ಪೊಲೀಸ್ ದೌರ್ಜನ್ಯದ ಬಗ್ಗೆ ಬಹುಶಃ ತಾವೆಲ್ಲರೂ ಪತ್ರಿಕೆಯಲ್ಲಿ ಓದುತ್ತೀರೆಂದು ಕಾಣುತ್ತದೆ. ನೀರಾ (ಹೆಂಡ) ಚಳುವಳಿಯನ್ನು ಹತ್ತಿಕ್ಕುವಂತಹ ಪ್ರಯತ್ನವನ್ನು ಸರ್ಕಾರವು ಮಾಡುತ್ತಿದೆ ಎನ್ನುವ ಹಿನ್ನೆಲೆಯಲ್ಲಿ ಅದು ಆಗಬಾರದು, ಆ ನೀರಾ ಇಳಿಸುವುದರಿಂದಾಗಿ ಸಾವಿರಾರು ಕುಟುಂಬಗಳು ಬದುಕುತ್ತಿದ್ದಾರೆ, ಅಂತಹವರಿಗೆ ತೊಂದರೆಯಾಗಬಾರದು ಎಂಬ ಹಿನ್ನೆಲೆಯಲ್ಲಿ ಸರ್ಕಾರದ ನೀತಿಯನ್ನು ವಿರೋಧ ಮಾಡಿ ಅಲ್ಲಿ ಚಳುವಳಿಯನ್ನು ನಡೆಸುತ್ತಿದ್ದಾರೆ. ಸುಮಾರು 500 ರಿಂದ 600 ಜನ ಪೊಲೀಸರು ಏಕಾಏಕಿಯಾಗಿ ಚಳುವಳಿಗಾರರನ್ನು ಬಂಧನ ಮಾಡಿದ್ದು, ಬಂಧನದ ನಂತರ ಅವರೆಲ್ಲರನ್ನು ಬಂಧನ ಮಾಡಿದ್ದು, ಬಂಧನದ ನಂತರ ಅವರೆಲ್ಲರನ್ನೂ ಕೋರ್ಟಿಗೆ ಹಾಜರ್ಪಡಿಸದೆ ಇರುವುದು, ಜೊತೆಯಲ್ಲಿ ಅಕ್ಕಪಕ್ಕದ ಊರುಗಳಾದ ಬಿಸಿಲಳ್ಳಿ, ಹಿರಿಯೂರು, ಚಿಕ್ಕೂರು ಗ್ರಾಮಗಳಲ್ಲಿ ಧಾಳಿಯನ್ನು ನಡೆಸಿ ಮಹಿಳೆ ಮತ್ತು ಮಕ್ಕಳ ಮೇಲೆ ದೌರ್ಜನ್ಯವನ್ನು ನಡೆಸಿರುವುದು ತಮ್ಮ ಗಮನಕ್ಕೆ ಬಂದಿರಬಹುದೆಂದು ನಾನು ಭಾವಿಸುತ್ತೇನೆ. ಚಿಕ್ಕೂರಿನ ಬಳಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಒಂದು ಬಸ್ಸಿಗೆ ಬೆಂಕಿಯನ್ನು ಹಚ್ಚಿರುವುದು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಬಿಸಿಲಳ್ಳಿಯಲ್ಲಿ ಪೊಲೀಸರು ದೌರ್ಜನ್ಯವನ್ನು ಮಾಡಿದಾಗ ಅದನ್ನು ಪ್ರತಿಭಟಿಸಲಿಕ್ಕೆ ಜನರು ಹೋದಾಗ ಪೊಲೀಸರು ಅಶ್ರುವಾಯವನ್ನು ಸಿಡಿಸಿದರು. ರೈತರು ಮನೆಮನೆಗೆ ನುಗ್ಗಿ ಮಹಿಳೆ ಮತ್ತು ಮಕ್ಕಳ ಎಂದು ನೋಡದೆ ಅವರನ್ನು ಧಳಿಸಿದರು ಎಂಬ ವರದಿಗಳೂ ಕೂಡ ತಮ್ಮ ಗಮನಕ್ಕೆ ಬಂದಿದೆಯೆಂದು ನಾನು ಭಾವಿಸುತ್ತೇನೆ. ಅನೇಕ ಮನೆಮಠಗಳು, ಕಿಟಕಿ ಬಾಗಿಲುಗಳು ಹೆಂಚುಗಳು ಒಡೆದು ಹೋಗಿವೆ. ನಮ್ಮ ಬಾಗೂರು ನವಿಲೆ ಸುರಂಗದ ಸಂತ್ರಸ್ಥರ ಮೇಲೆ ಯಾವ ರೀತಿಯಾಗಿ ದೌರ್ಜನ್ಯ ನಡೆದಿದೆ ಅದೇ ರೀತಿಯಾಗಿ ಇಲ್ಲಿಯೂ ಕೂಡ ನಡೆದಿದೆ, ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇಷ್ಟು ಮಾತ್ರವಲ್ಲದೆ ಪೊಲೀಸರು ಇನ್ನೊಂದು ಸ್ಟೆಪ್ ಮುಂದೆ ಹೋಗಿದ್ದಾರೆ, ಅದೇನೆಂದರೆ ಅಲ್ಲಿರುವಂತಹ ನೀರಾ ಇಳಿಸುವಂತಹ ತೆಂಗಿನ ತೋಟಗಳಿಗೆ ನುಗ್ಗಿ ಅಲ್ಲಿಯ ಹೊಂಬಾಳೆಗಳನ್ನು ಕೂಡ ಕಡಿದುಹಾಕಿದ್ದಾರೆ ಎಂಬ ವರದಿಗಳನ್ನೂ

ಕೂಡ ನಮ್ಮ ಗಮನಕ್ಕೆ ಬಂದಿದೆ. ಹಲವಾರು ನಿರಪರಾಧಿಗಳನ್ನು ಕೂಡ ಬಂದಿಸಿದ್ದು ಅವರನ್ನು ಎಲ್ಲಿ ಇಟ್ಟಿದ್ದಾರೆಂಬುದು ಗೊತ್ತಿಲ್ಲ, ಹಲವಾರು ಜನರು ಈ ಪೊಲೀಸ್ ದೌರ್ಜನ್ಯದಿಂದಾಗಿ ಊರನ್ನು ಬಿಟ್ಟು ಹೋಗಿದ್ದಾರೆ. ಅಲ್ಲಿ ಭಾರಿ ಭಯದ ವಾತಾವರಣವಿರುವುದು ಗೊತ್ತಾಗಿದೆ, ಇದರಲ್ಲಿ ನಾನು ವಿಶೇಷವಾಗಿ ತಮ್ಮ ಗಮನವನ್ನು ಸೆಳೆಯುವುದೇನೆಂದರೆ, ಈ ರೀತಿಯ ಪೂರ್ವನಿಯೋಜಿತವಾದಂತಹ ಈ ಒಂದು ಧಾಳಿ, ಸ್ವಲ್ಪ ದಿವಸಗಳ ಹಿಂದೆ ಅರಸೀಕೆರೆ-ಬಾಣಾವರದ ಹತ್ತಿರದಲ್ಲಿ ಎಕ್ಸೈಸ್ ಕಾಂಟ್ರಾಕ್ಟರ್ ಯಾರು ವಹಿಸಿಕೊಂಡಿದ್ದಾರೆ, ಅವರು ಜೀಪಿನಲ್ಲಿ ಹೋಗುವಾಗ ಸ್ಯಾಚೆಟ್‌ಗಳನ್ನು ಎಳೆದರು ಎನ್ನುವ ಹಿನ್ನೆಲೆಯಲ್ಲಿ ಅಲ್ಲಿ ಒಂದು ದರೋಡೆ ಕೇಸ್ ಅಬ್ಕಾರಿ ಗುತ್ತಿಗೆದಾರರ ಹಿನ್ನೆಲೆಯಲ್ಲಿ ದಾಖಲಾಗಿತ್ತು. ನಿನ್ನೆ ಸಹ ನೇರವಾಗಿ ಅಬ್ಕಾರಿ ಗುತ್ತಿಗೆದಾರರ ಹಿನ್ನೆಲೆಯಿಂದ, ಅವರ ಪ್ರೋತ್ಸಾಹ ಹಾಗೂ ಬೆಂಬಲದಿಂದ ಆ ದರೋಡೆ ಕೇಸಿನ ತನಿಖೆಯ ಆಧಾರದಲ್ಲಿ, ಇವೆಲ್ಲವೂ ನಡೆದಿದೆ ಎಂಬುದನ್ನು ನಮ್ಮ ಗಮನಕ್ಕೆ ಬಂದಿದೆ. ಒಂದು ಭಾಗದಲ್ಲಿ ನೀರಾವನ್ನು ತೆಗೆಯುವಂಥದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ, ಮೊನ್ನೆ ಕೂಡ ಇದರ ಬಗ್ಗೆ ಚರ್ಚೆಯಾಗಿದೆ, ನೀರಾವರನ್ನು ತೆಗೆಯುವಂತಹವರು ಹಲವಾರು ಜನರು ಇದರಿಂದ ಜೀವನವನ್ನು ನಡೆಸುತ್ತಿದ್ದಾರೆ, ಆದರೆ ಅದರಲ್ಲಿ ಕಲಬೆರೆಕೆ ಆಗುವುದರ ಮುಖಾಂತರ ನೂರಾರು ಕುಟುಂಬಗಳಿಗೆ ತೊಂದರೆಯಾಗುತ್ತಿರುವುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಅದನ್ನು ನಾವು ಅಲ್ಲಗಳೆಯುತ್ತಿಲ್ಲ. ಆದರೂ ಕೂಡ ಈ ರೀತಿಯಾದಂತಹ ದೌರ್ಜನ್ಯ ಅಕ್ಷಮ್ಯವಾದದ್ದು, ಒಂದು ಬಸ್ಸನ್ನು ಸುಟ್ಟುಹಾಕಿದ್ದಾರೆಂಬ ಬಗ್ಗೆ ಮಾನ್ಯ ಸಚಿವರಾದ ಸಗೀರ ಅಹಮದ್‌ರವರಿಗೆ ಗೊತ್ತಾಗಿದೆ. ಇದರಲ್ಲಿ ಸುಮಾರು 60 ಜನರನ್ನು ಅರೆಸ್ಟ್ ಮಾಡಿದ್ದಾರೆ, ಅವರನ್ನು ಇನ್ನೂ ಕೂಡ ಕೋರ್ಟಿಗೆ ಹಾಜರ್ಪಡಿಸಲಿಲ್ಲ, ಅವರನ್ನು ಏನು ಮಾಡಿದ್ದಾರೆಂಬುದು ಗೊತ್ತಿಲ್ಲ, ನಿನ್ನೆ ಸಾಯಂಕಾಲದವರೆಗೆ ಅವರನ್ನು ಕೋರ್ಟಿಗೆ ಹಾಜರ್ಪಡಿಸಿರುವುದಿಲ್ಲ. ಅವರನ್ನು ಹಾಸನದ ಎಲ್ಲೋ ಒಂದು ಪೊಲೀಸ್ ಠಾಣೆಯಲ್ಲಿಟ್ಟಿದ್ದಾರೆ, ಇದರಲ್ಲಿ ಕೆಲವು ಜನ ಪೊಲೀಸ್ ಬಂಧನಕ್ಕೆ ಒಳಗಾದವರು ಎಲ್ಲಿದ್ದಾರೆಂಬುದು ಗೊತ್ತಿಲ್ಲ, ಅಲ್ಲಿ ಭಾರಿ ದೊಡ್ಡ ರೀತಿಯಲ್ಲಿ ದೌರ್ಜನ್ಯ ನಡೆದಿದೆ, ಇದರ ಬಗ್ಗೆ ಸರ್ಕಾರದ ನಿಲುವು ಏನು? ಈ ರೀತಿಯಾಗಿ ಮಾಡಬೇಕೆಂದು ಸರ್ಕಾರದ ಕುಮ್ಮಕ್ಕು ಏನಾದರೂ ಇತ್ತಾ ಅಥವಾ ಗುತ್ತಿಗೆದಾರರ ಪರವಾದಂತಹ ವ್ಯವಸ್ಥೆಯೇನಾದರೂ ಇತ್ತಾ? ನನಗೆ ತಿಳಿದ ಮಟ್ಟಿಗೆ ಪೊಲೀಸರೇ ಕೆಎಸ್‌ಆರ್‌ಟಿಸಿ ಬಸ್ಸಿಗೆ ಬೆಂಕಿಯನ್ನು ಹಚ್ಚಿ ಈ ಒಂದು ದೌರ್ಜನ್ಯದ ಕೇಸನ್ನು ಆ ಜನರ ಮೇಲೆ ಹಾಕಬೇಕೆನ್ನುವಂತಹ ಉದ್ದೇಶ ಕೂಡ ಇದೆ ಎಂಬ ವಿಷಯ ನಮ್ಮ ಗಮನಕ್ಕೆ ಬಂದಿದೆ. ಇದರ ಬಗ್ಗೆ ಸರ್ಕಾರ ಏನು ತಿಳಿದುಕೊಂಡಿದೆ. ಇದರ ಬಗ್ಗೆ ಸರ್ಕಾರ ಯಾವ ಸ್ಟೆಪ್‌ನ್ನು ತೆಗೆದುಕೊಳ್ಳುತ್ತಿದೆ, ಈ ದೌರ್ಜನ್ಯವನ್ನು ಎಸಗಿರುವಂತಹ ಪೊಲೀಸರ ಮೇಲೆ ಏನು ಕಾನೂನು ಕ್ರಮವನ್ನು ಕೈಗೊಳ್ಳುತ್ತೀರಿ, ಇದು ಯಾವ ಹಂತದಲ್ಲಿದೆ ಎಂಬುದರ ಬಗ್ಗೆ ಸದನಕ್ಕೆ ತಿಳಿಸಬೇಕು. ನಿರಪರಾಧಿಗಳ ಮೇಲೆ ಈ ರೀತಿಯಾದ ಅನ್ಯಾಯವೆಸಗಿರುವವರ, ಪೊಲೀಸರ ಮೇಲೆ ಸೂಕ್ತ ಕಾನೂನಿನ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಆಗ್ರಹ ಮಾಡುತ್ತೇನೆ.

+ಶ್ರೀ ಸಿ. ಬೈರೇಗೌಡ (ವೇಮಗಲ್): ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಸತತವಾಗಿ ನಮ್ಮಂತಹ ಕೆಲವರು ತೆಂಗು ಬೆಳೆಯುವಂತಹ ಜಿಲ್ಲೆಗಳಲ್ಲಿ ರೈತರುಗಳು ಸರ್ವನಾಶರಾಗಿದ್ದಾರೆಂದು

ಒಂದೆರಡು ಬಾರಿ ಪ್ರಸ್ತಾಪವನ್ನು ಸಹ ನಾನು ಸದನದಲ್ಲಿ ಮಾಡಿದ್ದೇನೆ. ನೂರಾರು ವರ್ಷ ಇರುವಂತಹ ತೆಂಗಿನ ಮರವನ್ನು ಕಡಿಯುತ್ತಿದ್ದಾರೆ, ಇವತ್ತಿನ ದಿವಸ 10 ರೂಪಾಯಿಗೆ 3-4 ತೆಂಗಿನ ಕಾಯಿಗಳನ್ನು ಕೇಳುವವರು ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ. ಈ ಹಿಂದೆ ನುಸಿ ರೋಗದ ಬಗ್ಗೆ ಸದನದಲ್ಲಿ ಚರ್ಚೆಯಾಗಿದೆ. ಸರ್ಕಾರದವರು ಸುಮಾರು 2½ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡಿದ್ದಾರೆ. ಇದರಿಂದಾಗಿ ಏನೂ ಪ್ರಯೋಜನವಾಗುವುದಿಲ್ಲವೆಂದು ನಾನು ಅವತ್ತೂ ಕೂಡ ಹೇಳಿದ್ದೇನೆ, ಆದರೂ ಕೂಡ ಸರ್ಕಾರದವರು ಹಣವನ್ನು ಖರ್ಚು ಮಾಡಿದ್ದಾರೆ. ಇವತ್ತು ರೈತರು ಸರ್ವನಾಶವಾಗುವಂತಹ ಪರಿಸ್ಥಿತಿ ಉಂಟಾಗಿದ್ದು, ಸರ್ಕಾರಕ್ಕೆ ಇದರಿಂದಾಗಿ ಹಣ ಖರ್ಚಾಗಿದೆ, ಆದರೂ ಕೂಡ ಪ್ರಯೋಜನವಾಗಿರುವುದಿಲ್ಲ, ಇದು ಎಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಇವತ್ತು ರೈತರು ತಾನು ಬೆಳೆದಂತಹ ಬೆಳೆಯನ್ನು ಬಹಳ ಕಷ್ಟಪಟ್ಟು ಉಳಿಸಿಕೊಳ್ಳಬೇಕು. ಇದರಿಂದಾಗಿ ಆಕಸ್ಮಾತ್ ಲಾಭ ಏನಾದರೂ ಬಂದರೆ ನಾಲ್ಕಾರು ಕಾಸು ಸಿಗಲಿ ಎಂಬ ಉದ್ದೇಶದಿಂದ ರೈತನು ಇಷ್ಟೆಲ್ಲಾ ಶ್ರಮವನ್ನು ಪಡುತ್ತಿದ್ದಾನೆ. ಸರ್ಕಾರ ತನ್ನ ಹಠಮಾರಿತನವನ್ನು ಬಿಡುವುದಕ್ಕೆ ತಯಾರಿಲ್ಲ, ಎಲ್ಲಿ ಶೇಂದಿಯನ್ನು ಉತ್ಪಾಸಿತಕ್ಕಂತಹ ಮರಗಳು ಇಲ್ಲವೋ ಅಲ್ಲಿ ರದ್ದುಪಡಿಸುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದೀರಿ. ಎಲ್ಲಿ ಮರವಿಲ್ಲವೋ ಅದನ್ನು ರದ್ದು ಮಾಡಲಿ ಮರಗಳು ಇರುವ ಕಡೆ ತೆಂಗಿನಕಾಯಿಯೂ ಸಿಗುತ್ತಿಲ್ಲ, ಬೆಳೆ ಹಾಳಾಗುತ್ತಿದೆ, ಇದರಿಂದಾಗಿ ರೈತರಿಗೆ ನಷ್ಟವಾಗುತ್ತಿದೆ. ಶೇಂದಿಯನ್ನು ಇಳಿಸುವುದಕ್ಕೆ ತೊಂದರೆಯೇನು? ಈ ಸಾರಿಯ ಬಜೆಟ್‌ನಲ್ಲಿ ಬೀಡಿ-ಸಿಗರೇಟು ಮಾರುವ ರೀತಿಯಲ್ಲಿ ಬಿಯರ್‌ನ್ನು ಮಾರಾಟ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆದರೆ ಬಿಯರ್‌ನ್ನು ತಯಾರು ಮಾಡುವವರು ಯಾರು ಸ್ವಾಮಿ? ಬಿಯರ್‌ನ್ನು ತಯಾರಿಸುವವರು ಸಾಮಾನ್ಯ ಜನರೇ? ಹಾಸನ ಜಿಲ್ಲೆಯಲ್ಲಿರುವಂತಹ ಸಮಸ್ಯೆಯೇ ಚಿಕ್ಕಮಗಳೂರಿನಲ್ಲಿ ಇದೆ. ಚಿಕ್ಕಮಗಳೂರಿನಲ್ಲಿರುವಂತಹ ಸಮಸ್ಯೆಗಳೇ ಕರಾವಳಿ ಜಿಲ್ಲೆಯಲ್ಲಿ ಇರುತ್ತದೆ. ಎಲ್ಲಿ ತೆಂಗನ್ನು ಬೆಳೆಯುತ್ತಿದ್ದಾರೋ ಅಲ್ಲೆಲ್ಲಾ ಕೂಡ ಈ ಸಮಸ್ಯೆ ಇದೆ. ಇಲ್ಲಿ ಲಕ್ಷಾಂತರ ಜನರು ತೆಂಗನ್ನು ಬೆಳೆಯುತ್ತಿದ್ದಾರೆ. ಆದರೆ ಬಿಯರ್‌ನ್ನು ತಯಾರು ಮಾಡುವಂತಹವರು ಕೇವಲ ಬೆರಳೆಣಿಸುವಷ್ಟು ಜನರು ಮಾತ್ರ ಇದ್ದಾರೆ. ಆದರೆ ಬಿಯರ್‌ನ್ನು ತಯಾರು ಮಾಡುವವರು ಅದರಲ್ಲೂ ಮುಖ್ಯವಾಗಿ ಒಬ್ಬರೇ ಇದ್ದಾರೆ. ಅವರ ಉತ್ಪನ್ನತೆಗೆ ಇವತ್ತು ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳಿ, ಹಾದಿ ಬೀದಿಯಲ್ಲಿ ಇವತ್ತು ಬಿಯರ್‌ನ್ನು ಮಾರಾಟ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದೀರಿ. ಆದರೆ ರೈತರುಗಳು ಸಾಯುತ್ತಿದ್ದಾರೆ. ಅವರನ್ನು ಉಳಿಸಿ ಎಂದು ನಾವು ಎಷ್ಟೇ ಪ್ರಯತ್ನವನ್ನು ಪಟ್ಟರೂ ಕೂಡ ಇವತ್ತಿನ ದಿವಸ ಸಾಧ್ಯವಾಗುತ್ತಿಲ್ಲ. ಬಿಯರ್‌ನ್ನು ಮಾರಾಟ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ಬಿಯರ್ ತಯಾರಿಸುವವರು 3-4 ಜನರು ಇದ್ದಾರೆ. ಇದರಿಂದಾಗಿ ಲಕ್ಷಾಂತರ ರೈತರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದರ ಮರದಲ್ಲಿರುವ ನೀರಾವನ್ನು ಇಳಿಸಿ ಅದನ್ನು ಮಾರಾಟ ಮಾಡುವುದಕ್ಕೆ ಏಕೆ ಅವಕಾಶವನ್ನು ಕೊಡಬಾರದು?

11.30 ಎ.ಎಂ

**ಶ್ರೀ ಡಿ.ಬಿ. ಚಂದ್ರೇಗೌಡ:** ಶೂನ್ಯವೇಳೆಯಲ್ಲಿ ಚರ್ಚೆ ಮಾಡತಕ್ಕ ವಿಷಯ ಯಾವುದು? ಇದು ಹಾಸನಕ್ಕೆ ಸಂಬಂಧಪಟ್ಟ ವಿಷಯ.

**ಶ್ರೀ ಸಿ. ಬೈರೇಗೌಡ:** ನಾವು ಪ್ರತಿಭಟನೆಯನ್ನು ಮಾಡುತ್ತಿದ್ದೇವೆ. ಹಾಸನದಲ್ಲಿ ಎಲ್ಲಾ ರೈತರು ವ್ಯಾಪಕವಾಗಿರತಕ್ಕ ಚಳುವಳಿಯನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಪರಿಣಾಮ ಏನಾದರೂ ಆಗಲಿ. ನೀರಾ ಇಳಿಸತಕ್ಕ ರೈತರು ಆ ಕೆಲಸವನ್ನು ಮಾಡುತ್ತಾರೆ. ರೈತರನ್ನು ಹೆದರಿಸುವ ಬೆದರಿಸುವ ದಾರಿಗಳು ಇದ್ದರೆ ನೀವು ಅದನ್ನು ಮಾಡಿ. ಆದರೆ ಇವತ್ತಿನ ದಿವಸ ರೈತರ ಮೇಲೆ ನಡೆದಿರತಕ್ಕ ದಬ್ಬಾಳಿಕೆ ಮತ್ತು ಕೆಲವರನ್ನು ದಸ್ತಗಿರಿ ಮಾಡಿದ್ದೀರಿ. ಅವರನ್ನು ಇದುವರೆಗೆ ನಾಪತ್ತೆ ಮಾಡಿತಕ್ಕದ್ದು ಏನಿದೆ, ಅದು ಸರಿಯಲ್ಲ. ನಾವು ಯಾವ ರಾಜ್ಯದಲ್ಲಿದ್ದೇವೆ? ಯಾವುದಾದರೂ ಆಫ್ರಿಕಾ ದೇಶದಲ್ಲಿದ್ದೇವೆಯೋ? ಪ್ರಜಾಪ್ರಭುತ್ವ ಇಲ್ಲದಿರತಕ್ಕ ಕತ್ತಲೆಯ ರಾಜ್ಯದಲ್ಲಿ ಇದ್ದೇವೆಯೋ? ರೈತರ ಮೇಲೆ ಈ ರೀತಿಯಾದ ದಬ್ಬಾಳಿಕೆಯನ್ನು ಮಾಡುತ್ತಿದ್ದೀರಿ. ರೈತರ ಅಳಿವು ಉಳಿವಿನ ಪ್ರಶ್ನೆ ಬಂದಾಗ ಅವರು ಯಾವುದನ್ನೂ ಕೂಡ ಲೆಕ್ಕಕ್ಕೆ ಇಡುವುದಿಲ್ಲ. ಇದನ್ನು ಸರ್ಕಾರ ಗಮನಿಸಬೇಕು. ಯಾರನ್ನು ದಸ್ತಗಿರಿ ಮಾಡಿದ್ದೀರಿ ಅವರನ್ನು ತಕ್ಷಣ ಬಿಡುಗಡೆ ಮಾಡತಕ್ಕ ಕೆಲಸವನ್ನು ಮಾಡಬೇಕು. ನೀರಾ ಇಳಿಸುವವರಿಗೆ ನೀವು ಬೇಕಾದರೆ ಟ್ಯಾಕ್ಸ್ ಹಾಕಿ. ನೀರಾ ಇಳಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಬಜೆಟ್ ಮಂಡಿಸಿರತಕ್ಕ ಹಿನ್ನೆಲೆಯಲ್ಲಿ ನಾನು ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ):** ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ಅರಸೀಕೆರೆ ಸುತ್ತಮುತ್ತ ಇರತಕ್ಕ ರೈತರ ಮೇಲೆ ದೌರ್ಜನ್ಯವಾಗಿರತಕ್ಕದ್ದು ಪತ್ರಿಕೆಗಳಲ್ಲಿ ಬಂದಿದೆ. ನಿನ್ನೆ ಟೆಲಿವಿಷನ್ ಮಾಧ್ಯಮಗಳಲ್ಲಿ ಕೂಡ ಬಂದಿದೆ. ರೈತರನ್ನು ಅಮಾನುಷವಾಗಿ ಹೊಡೆದಿದ್ದಾರೆ. ಹೆಂಗಸರು ಮತ್ತು ಮಕ್ಕಳನ್ನು ಅವರ ಮನೆಗೆ ನುಗ್ಗಿ ಎಳೆದುಕೊಂಡು ಬಂದು ಹೊಡೆದಿದ್ದಾರೆ. ನಾನು ಹೇಳುವುದು ಇಷ್ಟೆ. ಅಲ್ಲಿ ಖಾಯಂ ಆಗಿ ಈ ರೀತಿ ಆಗುತ್ತಿದೆ. ಈ ರೀತಿ ಎರಡನೆಯ ಸಾರಿ ದೌರ್ಜನ್ಯವಾಗುತ್ತಿದೆ. ಪೊಲೀಸರು ಸಾರಾಯಿ ಗುತ್ತಿಗೆದಾರರ ಪರವಾಗಿ, ಅವರ ಸಂಬಳದ ಆಳುಗಳಂತೆ ವರ್ತನೆ ಮಾಡಿದ್ದಾರೆ. ಅಲ್ಲಿ ನೀರಾವನ್ನು ಇಳಿಸಿ ಜನ ಕುಡಿದರೆ, ಅಲ್ಲಿ ಸಾರಾಯಿ ಮಾರಾಟವಾಗುವುದಿಲ್ಲವೆನ್ನುವ ಒಂದೇ ಕಾರಣಕ್ಕೆ ಅಲ್ಲಿನ ಪೊಲೀಸರಿಗೆ ಪ್ರೆಸರ್ ತಂದು ವಿಶೇಷ ಕಾರ್ಯಾಚರಣೆಯನ್ನು ಮಾಡುತ್ತಿದ್ದಾರೆ. ನೈಸರ್ಗಿಕವಾಗಿ ಬರತಕ್ಕ ತೆಂಗಿನ ನೀರಾವನ್ನು ತೆಗೆದುಕೊಳ್ಳುತ್ತಿದ್ದಾರೆ. ತೆಂಗಿನಕಾಯಿ ಬೆಲೆ ಕಡಿಮೆಯಾದಂತಹ ಸಂದರ್ಭದಲ್ಲಿ ರೈತರಿಗೆ ಇದು ಅನಿವಾರ್ಯ. ಇವತ್ತು ಎಲ್ಲೆಲ್ಲೂ ಸೆಕೆಂಡ್ಸ್ ಮಾರಾಟ ಮಾಡುತ್ತಿದ್ದಾರೆ. ಅವರ ಮನೆಗೆ ನುಗ್ಗಿ ಹೊಡೆಯುವುದಿಲ್ಲ. ಸಾರಾಯಿ ಪ್ಯಾಕೆಟ್ ಮಾಡಿ ರಾಜ್ಯಾದ್ಯಂತ ಮಾರಾಟ ಮಾಡುತ್ತಿದ್ದಾರೆ. ಅದರಲ್ಲಿ ಏನು ರಾಸಾಯನಿಕ ಹಾಕುತ್ತಾರೋ ಯಾರಿಗೂ ಗೊತ್ತಿಲ್ಲ. ಜನ ಅದನ್ನು ಕುಡಿದು ಸಾಯುತ್ತಿದ್ದಾರೆ. ಅಂತಹವರ ಮನೆಗೆ ನುಗಿಗ ಶಿಕ್ಷೆ ಕೊಡುತ್ತಿಲ್ಲ. ನಮ್ಮ ರೈತರ ಮೇಲೆ ಏಕೆ ಈ ದೌರ್ಜನ್ಯ? ದಯಮಾಡಿ ಸರ್ಕಾರ ಮಧ್ಯಪ್ರವೇಶ ಮಾಡಿ ದಸ್ತಗಿರಿ ಮಾಡಿರುವವರನ್ನು ರಿಲೀಸ್ ಮಾಡಬೇಕು. ರೈತರ ಬೇಡಿಕೆ ನೀರಾ ಇಳಿಸುವುದು ಏನಿದೆ ಅದನ್ನು ಈಡೇರಿಸುವ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ತಕ್ಷಣ ಹೇಳುವುದಕ್ಕಾಗುವುದಿಲ್ಲ. ಈಗತಾನೇ ಪ್ರಸ್ತಾಪ ಮಾಡಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಅವರಿಗೆ ವಿಷಯ ತಿಳಿಸಿ ಹೇಳಿಕೆ ಕೊಡಿಸೋಣ.

## (ಆ) ಬೆಳಗಾಂ ವಿಭಾಗದಲ್ಲಿ ಧರ್ಮದತ್ತಿ ಆಯುಕ್ತರಿಗೆ ಹಣ ಬಿಡುಗಡೆ ಮಾಡುತ್ತಿರುವುದರಿಂದ ಆಗುತ್ತಿರುವ ತೊಂದರೆ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಸಚಿವರು ಇಲ್ಲ. ಆದರೂ ಕೂಡ ಹಿರಿಯ ಸಚಿವರು ಇದ್ದಾರೆ. ಇವತ್ತು ನಮ್ಮಲ್ಲಿ ಏನಾಗಿದೆ ಅಂದರೆ ಧರ್ಮದತ್ತಿ ಆಯುಕ್ತರಿಗೆ ನಮ್ಮ ಬೆಳಗಾಂ ವಿಭಾಗಕ್ಕೆ ಅಷ್ಟೇ ತೊಂದರೆ ಇರುವುದು. ಇಡೀ ರಾಜ್ಯದಲ್ಲಿ ಬೆಳಗಾಂ ವಿಭಾಗದಲ್ಲಿ ಧರ್ಮದತ್ತಿ ಆಯುಕ್ತರಿಗೆ ಹಣ ಬಿಡುಗಡೆ ಮಾಡುತ್ತೀರಿ. ಅದನ್ನು ತೆಗೆದುಕೊಳ್ಳುವುದರಲ್ಲಿ ತೊಂದರೆಯಾಗುತ್ತಿದೆ. ಸುಮಾರು ಐದಾರು ಏಳೆಂಟು ಹತ್ತು ವರ್ಷ ಹಣ ಹಾಗೆಯೇ ಇದ್ದು ಅದರ ಮೇಲೆ ಬಂದಂತಹ ಬಡ್ಡಿ 36 ಲಕ್ಷ ರೂಪಾಯಿಗಳನ್ನು ಹಂಚಿದ್ದಾರೆ. ದುಡ್ಡು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಆ ಬಡ್ಡಿ ಹಣವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇವತ್ತು ಏಕೆ ಹಣವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ನಾನು ತಮ್ಮ ಮುಂದೆ ಹೇಳುತ್ತೇನೆ. ಪಬ್ಲಿಕ್ ಟ್ರಸ್ಟ್ ಆಕ್ಟ್ ಎಂದಿದೆ ಅದು ತಮಗೂ ಗೊತ್ತು ಗೊತ್ತು. ಆ ಕಾಯಿದೆ ಪ್ರಕಾರ ಇಲ್ಲೊಂದು ಉದಾಹರಣೆ ಹೇಳುತ್ತೇನೆ. 20 ಸಾವಿರ ರೂಪಾಯಿ ಹಣವನ್ನು ಇಲ್ಲಿಂದ ಬಿಡುಗಡೆ ಮಾಡುತ್ತಾರೆ. ಅದನ್ನು ತೆಗೆದುಕೊಳ್ಳಬೇಕಾದರೆ ಏನೇನು ಮಾಡಬೇಕೆಂದರೆ, ಅಲ್ಲೊಂದು ಟ್ರಸ್ಟ್ ಮಾಡಿಕೊಳ್ಳಬೇಕು. ಹಾಗೆ ಟ್ರಸ್ಟ್ ಮಾಡಿಕೊಳ್ಳಬೇಕಾದರೆ ಮೂರು ತಿಂಗಳಾಗುತ್ತದೆ. ಬೆಳಗಾಂಗೆ ಅಡ್ಡಾಡಿ 20 ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುವುದರಲ್ಲಿ ಸುಮಾರು 10 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. 10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೂ ಅಲ್ಲಿ ಹತ್ತು ಪರ್ಸೆಂಟ್ ರೊಕ್ಕ ಕೊಡಬೇಕು. ಧರ್ಮದತ್ತಿ ಆಯುಕ್ತರ ಆಫೀಸಿನಲ್ಲಿ ದುಡ್ಡು ಇಲ್ಲದೆ ಹಣ ಬಿಡುಗಡೆ ಮಾಡುವುದಿಲ್ಲ. ಮತ್ತೆ ಅದಕ್ಕೆ ಏನೇನೋ ಕಂಡೀಷನ್ಸ್ ಹಾಕುತ್ತಾರೆ. ಇದು ಓಪನ್ ಸೀಕ್ರೆಟ್. ಹಾಗೆ ಹೇಳಿದರೆ ತಪ್ಪೇನೂ ಇಲ್ಲ. ಇವತ್ತು ಏನಾಗಿದೆ ಅಂದರೆ, ಒಂದು ಟ್ರಸ್ಟ್ ಮಾಡಿ ನೋಂದಾಯಿಸಲು ಅಂದಾಜು ಪತ್ರಿಕೆ ತಯಾರು ಮಾಡಬೇಕು. ಕಾಮಗಾರಿ ಮಾಡುವವರ ಆಸ್ತಿ ಬಗ್ಗೆ ಪಂಚಾಯಿತಿಯ ಉತಾರ ಕೊಡಬೇಕು. ಟ್ರಸ್ಟ್‌ನ ಛೇರ್ಮನ್ ಅಥವಾ ಅಧ್ಯಕ್ಷರು 15 ರೂಪಾಯಿ ಸ್ಟ್ಯಾಂಪ್ ಪೇಪರ್ ಮೇಲೆ ಬರೆದು ಕೊಡಬೇಕು. ಹಳೆಯ ಟ್ರಸ್ಟ್ ಕಮಿಟಿಯ ಠರಾವು ತರಬೇಕು. ಈ ರೀತಿಯ ಕಂಡೀಷನ್ಸ್ ಹಾಕಿ ಕಳುಹಿಸುತ್ತಾರೆ. ಈ ವರ್ಷ ಹೊಸದಾಗಿ ಹಲವು ಕಂಡೀಷನ್ಸ್ ಕೊಡಿಸಿದ್ದಾರೆ. ನಿಮ್ಮ ದೇವಾಲಯದ ಕಟ್ಟಡದ ಕಾಮಗಾರಿ ಅಂದಾಜು ವೆಚ್ಚದ ಒಟ್ಟು ಮೊತ್ತದಲ್ಲಿ ಅರ್ಧ ಹಣ ಅಥವಾ ಕಾಲು ಭಾಗ ಹಣವನ್ನು ಸಾರ್ವಜನಿಕ ವಂತಿಗೆಯಿಂದ ಸಂಗ್ರಹಿಸಬೇಕಾಗಿದೆ. ಕಾಮಗಾರಿ ಈಗಾಗಲೇ ಪ್ರಗತಿಯಲ್ಲಿದ್ದರೆ ಲೋಕೋಪಯೋಗಿ ಇಲಾಖೆಯಿಂದ ದಾಖಲೆಯನ್ನು ಪಡೆಯಬೇಕು.